# ಅಂತರ್ಧರ್ಮೀಯ ಸಂಸತ್ತು

ಫ್ರಾನ್ಸಿನ ಚಾರ್ಲಿ ಹೆಬ್ಡೊ ಪತ್ರಿಕೆಯ ಮೇಲೆ ದಿ. 7.1.2015 ರಂದು ಧರ್ಮಾಂಧರು ದಾಳಿ ನಡೆಸಿದರು. ಹನ್ನೆರಡು ಮಂದಿ ಪತ್ರಿಕೆಯ ಸಿಬ್ಬಂದಿ ಪ್ರಾಣ ಕಳೆದುಕೊಂಡರು. ನಂತರದ ಕೆಲದಿನಗಳಲ್ಲಿ ಈ ಘಟನೆ ಯೂರೋಪನ್ನು ಉಸಿರು ಬಿಗಿ ಹಿಡಿಯುವಂತೆ ಮಾಡಿತ್ತು. ಲೋಕದ ಇತಿಹಾಸವನ್ನು ಗಮನಿಸಿದರೆ ಮನುಕುಲದ ನಾಶ ಘಟಿಸುತ್ತಿರುವುದು ಧರ್ಮಕಾರಣದಿಂದಲೇ. ದೇವಕಣಗಳ (ಹಿಗ್ಸ್ ಬೋಸನ್ ಕಣ) ಸ್ಫೋಟದ ನಂತರವೂ ವಿಜ್ಞಾನಕ್ಕೆ ದೇವರನ್ನು ಮಣಿಸಲು ಸಾಧ್ಯವಾಗಿಲ್ಲ. ಮನುಷ್ಯನ ಮನಸ್ಸಿನಲ್ಲಿ ಆಳವಾಗಿ ಬೇರುಬಿಡುವ ನಂಬುಗೆಗೆ ಅಗಾಧ ಶಕ್ತಿ ಇದೆ. ಆ ನಂಬುಗೆಯನ್ನು ದೃಢಪಡಿಸಿಕೊಳ್ಳಲು ಎದುರಾಳಿಯನ್ನು ನಾಶ ಮಾಡುತ್ತಾನೆಯೆ ಹೊರತು ಅದನ್ನು ತಿದ್ದಿಕೊಳ್ಳಲಾರ. ಎಲ್ಲ ಧರ್ಮದ ನಂಬುಗೆಗಳಿಗಿಂತಲೂ ದೇವರ ಮೇಲಿನ ಇಸ್ಲಾಂ ಧರ್ಮದ ನಂಬುಗೆ ಗಾಢವಾದದ್ದು, ತೀವ್ರವಾದದ್ದು. ಇಸ್ಲಾಂ ಹೇಳುವ ಐದು ಮೂಲತತ್ವಗಳಲ್ಲಿ ದೇವರು ಒಬ್ಬನೆ, ಅವನೇ ಅಲ್ಲಾಹು ಮತ್ತು ಆತನ ಪ್ರವಾದಿ ಮಹಮ್ಮದ್ ಪೈಗಂಬರ್ ಎಂಬುವುದೂ ಒಂದು. ಈ ನಂಬುಗೆ ಸ್ವಲ್ಪ ಸಡಿಲವಾದರೂ ಆತ ಮುಸ್ಲಿಮನಾಗಿರಲಾರ, ಕಾಫಿರನಾಗಿಬಿಡುತ್ತಾನೆ. ಈ ನಂಬುಗೆಯೊಂದಿಗೇ ಮುಸಲ್ಮಾನನಾದವನು ಒಬ್ಬ ತತ್ವಶಾಸ್ತ್ರಜ್ಞನೂ, ಶ್ರಮಿಕನೂ, ವೈದ್ಯನೂ, ವ್ಯಾಪಾರಿಯೂ ಆಗಿ ಬೆಳೆಯುತ್ತಿರುತ್ತಾನೆ. ಇದನ್ನು ಮನಗಂಡು ಜಾತ್ಯತೀತರೆನಿಸಿಕೊಂಡವರು ಆತನ ಅವಿಚ್ಛಿನ್ನ ನಂಬುಗೆಯನ್ನು ಪುರಸ್ಕರಿಸಬೇಕಾಗುತ್ತದೆ ಅಥವಾ ಕನಿಷ್ಠ ತಟಸ್ಥರಾಗಿರಬೇಕಾಗುತ್ತದೆ.

ಚಾರ್ಲಿ ಹೆಬ್ಡೊ ಹೇಳಿಕೇಳಿ ವ್ಯಂಗ್ಯಚಿತ್ರ ಪತ್ರಿಕೆ. ಸಮಾಜದ ಅಂಕುಡೊಂಕುಗಳನ್ನು ರೇಖೆಗಳ ಮೂಲಕವೇ ವಿಡಂಬಿಸುವ, ಆ ಮೂಲಕ ಬುದ್ಧಿಜನರನ್ನು ಕೆಣಕುವ ಕೆಲಸ ಮಾಡುತ್ತಾ ಬಂದಿದೆ. ಆದರೆ ದಾಳಿಯ ನಂತರ ತಮ್ಮ ಧೈರ್ಯ ಪ್ರದರ್ಶನಕ್ಕಾಗಿಯೊ, ಜಾತ್ಯತೀತತೆಯನ್ನು ಮೆರೆಯಲಿಕ್ಕಾಗಿಯೊ ಮತ್ತೆ ಪ್ರವಾದಿ ಮಹಮ್ಮದರ ವ್ಯಂಗ್ಯಚಿತ್ರ ಪ್ರಕಟಿಸಿರುವುದು ಖಂಡನೀಯ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಪರನಿಂದನೆ ಸಲ್ಲದು. ಇದು ಕಾಲುಕೆರೆದು ಕೆಣಕುವ ಕೆಲಸ. ಜಗತ್ತಿನ ಅನುಕಂಪವೇ ತಮ್ಮೊಂದಿಗಿದ್ದರೂ ಒಗ್ಗಟ್ಟನ್ನು ಈ ರೀತಿ ಪ್ರದರ್ಶಿಸುವ ಅಗತ್ಯವಿರಲಿಲ್ಲ. ವ್ಯಾಟಿಕನ್ನಿನ ಪೋಪ್ ಫ್ರಾನ್ಸಿಸ್‌ರು ಹೇಳಿದ 'ಯಾರೇ ಆದರೂ ತನ್ನ ತಾಯಿಯನ್ನು ನಿಂದಿಸಿದಾಗ ಆಗುವ ಪರಿಣಾಮವನ್ನು ಊಹಿಸಲಾಗದು' ಎಂಬ ಮಾತು ಇದನ್ನೇ ಧ್ವನಿಸುತ್ತದೆ.

ಒಬ್ಬ ಮುಸಲ್ಮಾನ ಯಾವುದನ್ನು 'ನಿಷ್ಠೆ' ಎಂದು ತಿಳಿದುಕೊಂಡಿರುತ್ತಾನೋ ಅದನ್ನು ಹೊರಗಿನವನು 'ಕುರುಡು' ಎಂದು ವಾದಿಸಿದರೆ ಪ್ರಯೋಜನವೇನು? ಇವರಿಬ್ಬರಿಗೂ ಕೂಡುಸ್ಥಳವೆಂಬುದು (meeting point) ಸಿಗುವುದೇ ಇಲ್ಲ. ದೇವರ ಅಥವಾ ಪ್ರವಾದಿಯ ವಿಚಾರದಲ್ಲಿ ಒಬ್ಬ ಅನಕ್ಷರಸ್ಥನು ಮತ್ತು ಒಬ್ಬ ವೈಮಾನಿಕ ವಿಜ್ಞಾನಿಯೂ, ಒಬ್ಬ ವಿದ್ಯಾರ್ಥಿಯೂ ಮತ್ತು ಒಬ್ಬ ಸಿಂಪಿಗನೂ ಯಾಕೆ ಏಕಪ್ರಕಾರವಾಗಿ ಯೋಚಿಸುತ್ತಾರೆ? ತಂತ್ರಜ್ಞಾನವು ಆಧುನಿಕ ಬದುಕಿನ ಭಾಗವಾಗಿ ಯುವ ಪೀಳಿಗೆಗೆ ಯಥೇಚ್ಛ ಮನರಂಜನೆಯನ್ನೊದಗಿಸುತ್ತಿರುವ ಈ ಕಾಲದಲ್ಲಿಯೂ, ಮುಕ್ತ ಸಹಬಾಳ್ವೆಯ ವಾತಾವರಣವಿರುವ ಯೂರೋಪಿನಲ್ಲಿಯೂ ಪ್ರೇಮ ಕಾಮಗಳನ್ನು ಹತ್ತಿಕ್ಕಲು ಶಕ್ತರಾಗಿ ಕೊವುಚಿ ಸಹೋದರರಂಥ ಹರೆಯದ ಯುವಕರು ಯಾಕೆ ದೇವರ ಅಮಲೇರಿಸಿಕೊಂಡು ಹಿಂಸೆಯ ಬೆನ್ನೇರಿ ಪರಲೋಕಮಾರ್ಗಿಗಳಾಗುತ್ತಾರೆ? ದೇವರನ್ನು ಅತಿಯಾಗಿ ನೆಚ್ಚಿಕೊಂಡಿರುವ ದೇಶಗಳು ಕಡುಬಡತನದಲ್ಲಿ ನರಳುತ್ತಿವೆ ಎಂಬುದನ್ನು ಮರೆಯಬಾರದು. ಜಗತ್ತಿನ ಅತಿ ಎತ್ತರದ ಬಮಿಯಾನದ ಬುದ್ಧನ ಮೂರ್ತಿಯನ್ನು ಹೊಡೆದುರುಳಿಸಿದ ಅಫ್ಘಾನಿಸ್ತಾನದಿಂದ ಹಿಡಿದು ದೈವನಿಂದನೆಯ ನೆಪದಲ್ಲಿ ಅನ್ಯಧರ್ಮೀಯರನ್ನೂ ಬಿಡದೆ ಸಾರ್ವಜನಿಕವಾಗಿ ಕತ್ತು ಕೊಯ್ದು ಶಿಕ್ಷಿಸುವ ಸೊಮಾಲಿಯಾದವರೆಗೆ ಕಿತ್ತುತಿನ್ನುವ ಬಡತನವಿದೆ. ಧಾರ್ಮಿಕತೆಯ ವಿಷಯದಲ್ಲಿ ಐಷಾರಾಮೀ ಇಂಧನಸಿರಿ ಮಧ್ಯಪ್ರಾಚ್ಯ ರಾಷ್ಟ್ರಗಳು ಯಾಕೆ ಮೆದುವಾಗಿವೆ (ಸೌದಿ ಅರೇಬಿಯಾವನ್ನುಳಿದು)? ಇಂತಹ ಸೂಕ್ಷ್ಮ ವಿಷಯಗಳು ಅಧ್ಯಯನಯೋಗ್ಯವಾಗಿವೆ.

ಧರ್ಮವೆಂಬುದು ಅಫೀಮು ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದು ಆತ್ಯಂತಿಕ ಸತ್ಯವಾಗಿ ಕಾಣುತ್ತಿದೆ. ಆದ್ದರಿಂದ ಸದ್ಯ, ಕಣ್ಣಿಗೆ ಕಾಣದ ಸ್ವರ್ಗದ ಪರವಾಗಿ ಕಣ್ಣೆದುರಿನ ಬದುಕನ್ನು ನಾಶಮಾಡುವುದು ಅತಿರೇಕವೆಂದು ತಿಳಿಹೇಳುವ ಅಂತರ್ಧರ್ಮೀಯ ಸಂಸತ್ತಿನ ತುರ್ತು ಅಗತ್ಯವಿದೆ. ಈ ಸಂದರ್ಭದಲ್ಲಿ ಅಮೆರಿಕಾದ ಶ್ವೇತಭವನದ ವಕ್ತಾರನೊಬ್ಬ ಹೇಳಿದ ಮಾತು ಗಮನಾರ್ಹವಾಗಿದೆ. ಏಳನೇ ಶತಮಾನದ ನಂಬುಗೆಯನ್ನು ರಕ್ಷಿಸಿಕೊಳ್ಳಲು ಇಪ್ಪತ್ತೊಂದನೇ ಶತಮಾನದ ಶಸ್ತ್ರಾಸ್ತ್ರಗಳನ್ನು ಬಳಸುವುದು ಸರಿಯೆ?

ಆಸ್ತಿಕ ಧರ್ಮಗಳೂ ದೇವರನ್ನು ಕುರಿತು ಭಿನ್ನ ನಿಲುವು ತಾಳಿವೆ. ಇಸ್ಲಾಂ ದೇವರನ್ನು ಈ ಲೋಕದ ಆಚೆಯೆ ಅಂದರೆ ಕಣ್ಣುಮುಚ್ಚಿ ಮೇಲ್ಮುಖಮಾಡಿ ನೋಡುತ್ತದೆ. ಕ್ರೈಸ್ತ ಧರ್ಮ ಭೂಮಿಯ ಮೇಲೆಯೆ, ನೆರೆಹೊರೆಯನ್ನು ಪ್ರೀತಿಸಿ, ಸೇವೆಗೈಯ್ಯುವಲ್ಲಿ ದೇವರನ್ನು ಕಾಣುತ್ತದೆ. ಹಿಂದೂ ಧರ್ಮವಂತೂ ಈ ಎರಡೂ ಜಾಗಗಳನ್ನು ಬಿಟ್ಟು (ಸ್ಥೂಲವಾಗಿ ಹೇಳುವುದಾದರೆ) ದೇವರನ್ನು ತನ್ನೊಳಗೇ (ಅಹಂ ಬ್ರಹ್ಮಾಸ್ಮಿ) ನೋಡಬಹುದೆಂದು ಹೇಳುತ್ತದೆ. ದೇವರು ಆಕಾಶದಿಂದಾಚೆ ಎಲ್ಲೋ ಇದ್ದೇ ಇದ್ದಾನೆ ಎನ್ನುವವನು, ದೇವರು ಅಂದೇ ಅದೇ ಜಾಗದಲ್ಲಿ ಹುಟ್ಟಿದ್ದಾನೆ ಎನ್ನುವವನು ಇಬ್ಬರ ಕೈಯಲ್ಲೂ ಈಗ ಅಣುಬಾಂಬಿನ ಒತ್ತುಗುಂಡಿಗಳಿವೆ. ಅತಿಯಾದ ಭಕ್ತಿ ಭಕ್ತರನ್ನು ಕುರುಡರನ್ನಾಗಿಯೂ, ಕಿವುಡರನ್ನಾಗಿಯೂ ಮತ್ತು ಮೂಗರನ್ನಾಗಿಯೂ ಮಾಡುವುದರಿಂದ ಅದರ ಅಗತ್ಯ ಬಿದ್ದಾಗ ಅವರ್ಯಾರೂ ದೇವರ ಆಜ್ಞೆಗಾಗಿ ಕಾಯುವ ಪ್ರಮೇಯವೇ ಉದ್ಭವಿಸುವುದಿಲ್ಲ.

■ ಮೂಚಿ

## ಮಾತೇ ಮುತ್ತು

★ ಆಸೆ ಹುಟ್ಟುವುದು ಕಣ್ಣಿನಲ್ಲಲ್ಲ, ಮನಸ್ಸಿನಲ್ಲಿ. ಒಬ್ಬ ತನ್ನ ಕಣ್ಣುಗಳನ್ನೇ ಕಳೆದುಕೊಂಡರೂ ಆಸೆಗಳನ್ನು ದೂರೀಕರಿಸಲು ಆಗುವುದಿಲ್ಲ.

-ಓಶೋ

★ ನಾನು ಮಾಡುವ ಕೆಲಸಗಳನ್ನು ನೀವು ಮಾಡಲಾಗದು. ನೀವು ಮಾಡುವ ಕೆಲಸಗಳನ್ನು ನಾನು ಮಾಡಲಾಗದು. ಇಬ್ಬರೂ ಸೇರಿದರೆ ಅತ್ಯುತ್ತಮ ಕೆಲಸಗಳನ್ನು ಮಾಡಬಹುದು.

-ಮದರ್ ತೆರೆಸಾ

★ ಯಾವುದು ಏಕತೆಯನ್ನು ಉಂಟು ಮಾಡುವುದೋ ಅದೇ ಒಳಿತು. ಯಾವುದು ಪ್ರತ್ಯೇಕತೆಯನ್ನು ಉಂಟು ಮಾಡುವುದೋ ಅದೇ ಕೆಡುಕು.

-ಸ್ವಾಮಿ ವಿವೇಕಾನಂದ

★ ವಾಗ್ವಾದ, ಚರ್ಚೆ, ಅನುಮಾನಗಳನ್ನು ಕಡಿಮೆ ಮಾಡಿ, ಎಲ್ಲರಿಗೂ ಒಪ್ಪಿತವಾಗುವಂತಹ ಸರಳ ಪರಿಹಾರಗಳನ್ನು ಶೀಘ್ರ ಸೂಚಿಸುವವರೇ ಶ್ರೇಷ್ಠ ನಾಯಕರು.

-ಕಾಲಿನ್ ಪೊವೆಲ್

★ ಕಣ್ಣಿಗೆ ಕಣ್ಣು ಎಂದು ಹೊರಟರೆ ಇಡೀ ಜಗತ್ತೇ ಕುರುಡಾದೀತು.

-ಮಹಾತ್ಮಾ ಗಾಂಧೀಜಿ

★ ಲಕ್ಷಾಂತರ ಜನ ಸತ್ತಿದ್ದಾರೆ, ನಿನಗೂ ಸಾಯಲಿಕ್ಕಿದೆ. ಮರಣ ಮೃದಂಗ ನುಡಿಯುತ್ತಿದೆ. ಕೊನೆಗೆ ಉಳಿಯುವುದು ಸಾಧು– ಸಜ್ಜನರ ವಾಣಿಗಳು ಮಾತ್ರ.

-ಸಂತ ಕಬೀರ

★ ಖ್ಯಾತಿ ಎನ್ನುವುದು ಅಸೂಯಾಪರ ಪ್ರೇಯಸಿಯಂತೆ. ನಿಮಗೆ ಬೇರೆ ವೈರಿಗಳೇ ಬೇಕಿಲ್ಲ.

-ತಿರುವಳ್ಳುವರ್

★ ಮುಗ್ಧ ನಾಗರಿಕರು ಕೊಲೆಯಾಗುತ್ತಿರುವ ದೇಶಗಳಲ್ಲಿ , ನಾಯಕರು ತಮ್ಮ ಬುದ್ಧಿಯನ್ನು ಬಳಸುವ ಬದಲು ರಕ್ತವನ್ನು ಬಳಸುತ್ತಿದ್ದಾರೆ.

-ನೆಲ್ಸನ್ ಮಂಡೇಲ

★ ಯಶಸ್ಸು ಅಂತಿಮವಲ್ಲ; ವೈಫಲ್ಯ ಮಾರಣಾಂತಿಕವಲ್ಲ. ಏನೇ ಆದರೂ ಮುಂದೆ ಹೋಗಲು ಧೈರ್ಯ ಬೇಕು.

-ವಿನ್‌ಸ್ಟನ್ ಚರ್ಚಿಲ್

★ ಮೌನ ಕೂಡಾ ಮಾತುಕತೆಯೇ.

-ರಮಣ ಮಹರ್ಷಿ